ಡಾ॥ ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

1) 1996 ರಿಂದ ಇದುವರೆವಿಗೂ ರಾಜ್ಯದಲ್ಲಿ ಒಂದು ಜಿಲ್ಲಾಮಟ್ಟದ ಆಯುರ್ವೇದ ಆಸ್ಪತ್ರೆಯನ್ನು ಬೀದರ್‌ನಲ್ಲಿ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ 16 ಸರ್ಕಾರಿ ಆಯುರ್ವೇದ ಚಿಕಿತ್ಸಾಲಯಗಳನ್ನು ಸ್ಥಾಪಿಸಲಾಗಿದೆ. ರಾಜ್ಯದ ಸರ್ಕಾರಿ ಆಯುರ್ವೇದ ಆಸ್ಪತ್ರೆ : ಚಿಕಿತ್ಸಾಲಯಗಳಲ್ಲಿ ಒಟ್ಟು 31 ವೈದ್ಯರ ಹುದ್ದೆಗಳನ್ನು ಹೊರತುಪಡಿಸಿ ಉಳಿದೆಲ್ಲಾ ಹುದ್ದೆಗಳು ಭರ್ತಿಯಾಗಿವೆ. ಪ್ರಸ್ತುತದಲ್ಲಿ ಸ್ವಂತ ಕಟ್ಟಡಗಳನ್ನು ಹೊಂದಿರುವ ಜಿಲ್ಲಾ ಆಸ್ಪತ್ರೆಗಳ ಸಂಖ್ಯೆ : 5

2) ಸರ್ಕಾರಿ ಆಯುರ್ವೇದ ಕಾಲೇಜುಗಳ ಮೂಲಕ ಗ್ರಾಮಾಂತರ ಪ್ರದೇಶಗಳಲ್ಲಿ ಗ್ರಾಮೀಣ ಆರೋಗ್ಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಶಿಬಿರಗಳಲ್ಲಿ ಸಾರ್ವಜನಿಕರಿಗೆ ಚಿಕಿತ್ಸೆ, ಗಿಡಮೂಲಿಕೆಗಳ ಮಹತ್ವದ ಬಗ್ಗೆ ಪ್ರಚಾರ ನೀಡಲಾಗುತ್ತಿದೆ. ಇದರ ಜೊತೆಗೆ ಭಾರತೀಯ ವೈದ್ಯಪದ್ಧತಿ ಮತ್ತು ಹೋಮಿಯೋಪತಿ ನಿರ್ದೇಶನಾಲಯದಲ್ಲಿರುವ ಪ್ರಕಟಣಾ ವಿಭಾಗದಿಂದ ಕಿರು ಹೊತ್ತಿಗೆಗಳನ್ನು ವಿವಿಧ ವಿಷಯಗಳ ಬಗ್ಗೆ ಪ್ರಕಟಿಸಲಾಗುತ್ತಿದೆ. ರೇಡಿಯೋ ಹಾಗೂ ದೂರದರ್ಶನ ಮಾಧ್ಯಮದಲ್ಲೂ ಸಹ ಇಲಾಖೆಯ ವೈದ್ಯಾಧಿಕಾರಿಗಳ ಅಧ್ಯಾಪಕರುಗಳ ಗ್ರಾಮೀಣ ಆರೋಗ್ಯದ ಬಗ್ಗೆ ಭಾಷಣಗಳು ಪ್ರಚಾರಗೊಳ್ಳುತ್ತಿವೆ.

3) ಪ್ರಸಕ್ತ ಸಾಲಿನಿಂದ ಈ ಚಿಕಿತ್ಸಾಲಯದ ಉಪಯೋಗಕ್ಕೆ (1997-98) ಔಷಧ ವಿತರಣೆಯ ಮೊತ್ತ ರೂ. 50,000.00 ಗಳು.

4) 1996-97 ನೇ ಸಾಲಿನವರೆಗೆ ಈ ಚಿಕಿತ್ಸಾಲಯಕ್ಕೆ ಔಷಧಗಳ ಖರೀದಿಗಾಗಿ ರೂ. 25,000.00 ಗಳ ಆಯವ್ಯಯವನ್ನು ಒದಗಿಸಲಾಗುತ್ತಿತ್ತು. ಆದರೆ ಈ ಆಯವ್ಯಯವು ಔಷಧಿಗಳಿಗಾಗಿ ಕಡಿಮೆಯಾಗಿದೆ ಹಾಗೂ ಇದರಿಂದ ಮಾನ್ಯ ಶಾಸಕರುಗಳಿಗೆ ತೊಂದರೆಯಾಗಿದೆ ಎಂದು ಕಂಡು ಬಂದ ಕಾರಣ 1997-98ನೇ ಸಾಲಿನಿಂದ ಈ ಆಯವ್ಯಯವನ್ನು ರೂ. 25,000.00 ಗಳಿಂದ ರೂ. 50,000.00 ಗಳಿಗೆ ಹೆಚ್ಚಿಸಲಾಗಿದೆ. ಒಂದು ವೇಳೆ ಇನ್ನು ಮುಂದೆಯೂ ಔಷಧ ಖರೀದಿಗೆ ಈ ಆಯವ್ಯಯವು ಕೊರತೆಯೆಂದು ಕಂಡು ಬಂದರೆ ಆಯವ್ಯಯ ಅವಕಾಶ ಹೆಚ್ಚಿಸಲು ಪ್ರಸ್ತಾಪಿಸಲಾಗುವುದು.

ಪ್ರಾಥಮಿಕ ಶಾಲಾ ಶಿಕ್ಷಕರುಗಳಿಗೆ ಬಡ್ತಿ

417 (345) ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್) : ಮಾನ್ಯ ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ ?

1) 1994-95 ನೇ ಸಾಲಿನಲ್ಲಿ ಶಿಕ್ಷಣ ಇಲಾಖೆಯಲ್ಲಿ ಪ್ರಾಥಮಿಕ ಶಾಲಾ ಸಹ ಶಿಕ್ಷಕರಿಗೆ ಮುಖ್ಯೋಪಾಧ್ಯಾಯರಾಗಿ ಒಟ್ಟು ಎಷ್ಟು ಮಂದಿಗೆ ಬಡ್ತಿ ನೀಡಲಾಗಿದೆ.

2) 1994 ರ ಮೊದಲು ಬಡ್ತಿ ನೀಡಿದವರಲ್ಲಿ ಎಷ್ಟು ಮಂದಿ ಬಡ್ತಿಯ ಆದೇಶವನ್ನು ಪಾಲಿಸಿದ್ದಾರೆ. ಇವರಲ್ಲಿ ನಿರಾಕರಿಸಿದ ಶಿಕ್ಷಕರಿಗೆ ಅನೇಕ ಸಲ ಆದೇಶಗಳನ್ನು ನೀಡಿ ಅವರಿಗೆ ಬಡ್ತಿಯನ್ನು ಕೊಡಲು ಕಾರಣವೇನು?

3) ಆದರೆ 1994-95 ರಲ್ಲಿ ಈ ಬಡ್ತಿ ಹೊಂದಿದವರಿಗೆ ಒಂದೇ ಬಾರಿ ಆದೇಶವನ್ನು ನೀಡಿ ಅವರ ಬಡ್ತಿ ಮತ್ತು ಸ್ಥಗಿತ ವೇತನವನ್ನು ತಡೆ ಹಿಡಿಯಲಾಗಿದೆಯೇ? ಈ ರೀತಿ ನಿಯಮ ಬದಲಾಯಿಸಲು ಕಾರಣಗಳೇನು?

4) ಕೆ. ಸಿ. ಎಸ್. ಆರ್. ನಿಯಮ ಪ್ರಕಾರ ಮುಂಬಡ್ತಿಗೂ ಸ್ಥಗಿತ ವೇತನಕ್ಕೂ ಯಾವ ಸಂಬಂಧವಿಲ್ಲದಿದ್ದರೂ ಸ್ಥಗಿತ ವೇತನವನ್ನು ತಡೆ ಹಿಡಿಯಲು ಕಾರಣವೇನು:

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು)

1) ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ 1994-95 ನೇ ಸಾಲಿನಲ್ಲಿ ಪ್ರಾಥಮಿಕ ಶಾಲಾ ಸಹ ಶಿಕ್ಷಕರಿಗೆ 2860 ಮುಖ್ಯ ಶಿಕ್ಷಕರಾಗಿ ಬಡ್ತಿ ನೀಡಲಾಗಿದೆ.

2) 1994ರ ಮೊದಲು ಬಡ್ತಿ ನೀಡಿದವರಲ್ಲಿ ಒಟ್ಟು 7867 ಶಿಕ್ಷಕರು ಬಡ್ತಿಯ ಆದೇಶವನ್ನು ಪಾಲಿಸಿದ್ದಾರೆ. ಬಡ್ತಿ ನಿರಾಕರಿಸಿದ ಶಿಕ್ಷಕರಿಗೆ ಮತ್ತೆ ಬಡ್ತಿ ಆದೇಶಗಳನ್ನು ನೀಡಿರುವುದಿಲ್ಲ.

3) ಬಡ್ತಿ ನಿರಾಕರಿಸಿರುವ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಮತ್ತೆ ಬಡ್ತಿಯನ್ನು ನೀಡಿರುವುದಿಲ್ಲ. ಬಡ್ತಿ ನಿರಾಕರಿಸಿರುವ ಶಿಕ್ಷಕರಿಗೆ ಸರ್ಕಾರದ ಆದೇಶ ಸಂಖ್ಯೆ: ಎಫ್ ಡಿ 3: ಎಸ್ ಆರ್ ಪಿ 96: ದಿನಾಂಕ: 18.03.96ರ ಕಂಡಿಕೆ 4 ರಲ್ಲಿ ಬಡ್ತಿ ನಿರಾಕರಿಸಿದವರಿಗೆ ಸ್ಥಗಿತ ವೇತನ ಬಡ್ತಿಯನ್ನು ಕೊಡಬಾರದೆಂಬ ಆದೇಶದ ಹಿನ್ನೆಲೆಯಲ್ಲಿ ಸ್ಥಗಿತ ವೇತನ ಬಡ್ತಿಯನ್ನು ನೀಡಿರುವುದಿಲ್ಲ.

4) ಬಡ್ತಿಯನ್ನು ನಿರಾಕರಿಸಿದವರಿಗೆ ಸ್ಥಗಿತ ವೇತನ ಬಡ್ತಿಯನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್ ಡಿ 3: ಎಸ್ ಆರ್ ಪಿ 96: ದಿನಾಂಕ 18.03.96 ರ ಕಂಡಿಕೆ - 4ರ ಪ್ರಕಾರ ಸ್ಥಗಿತ ವೇತನ ಬಡ್ತಿಯನ್ನು ತಡೆ ಹಿಡಿಯಲಾಗಿದೆಯೇ ಹೊರತು ಕೆ.ಸಿ. ಎಸ್. ಆರ್. ನಿಯಮವನ್ನು ಇಲ್ಲಿ ಅಳವಡಿಸಲಾಗುತ್ತಿಲ್ಲ.

ಅನುಬಂಧ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	1994-95 ನೇ ಸಾಲಿನಲ್ಲಿ ಮುಖ್ಯ ಶಿಕ್ಷಕರಾಗಿ ಬಡ್ತಿ ನೀಡಿದ ಸಹ ಶಿಕ್ಷಕರ ಸಂಖ್ಯೆ	1994ರ ಮೊದಲು ಬಡ್ತಿಯ ಆದೇಶವನ್ನು ಪಾಲಿಸಿದವರು
1)	ಬೆಂಗಳೂರು ಉತ್ತರ ಜಿಲ್ಲೆ	14	14
2)	ಬೆಂಗಳೂರು ದಕ್ಷಿಣ	65	38
3)	ಬೆಂಗಳೂರು ಗ್ರಾಮಾಂತರ	ಬಡ್ತಿ ನೀಡಿಲ್ಲ	-
4)	ಕೋಲಾರ	187	956
5)	ತುಮಕೂರು	650	650
6)	ಶಿವಮೊಗ್ಗ	107	801
7)	ಚಿತ್ರದುರ್ಗ	ಬಡ್ತಿ ನೀಡಿಲ್ಲ	980
8)	ಮೈಸೂರು	194	185
9)	ಮಂಡ್ಯ	61	518
10)	ಹಾಸನ	123	81
11)	ಚಿಕ್ಕಮಗಳೂರು	112	196
12)	ಕೊಡಗು	24	134
13)	ದಕ್ಷಿಣ ಕನ್ನಡ	177	428

14)	ಬೆಳಗಾಂ	210	73
15)	ಬಿಜಾಪುರ	194	442
16)	ಧಾರವಾಡ	238	1414
17)	ಉತ್ತರಕನ್ನಡ	98	436
18)	ಗುಲ್ಬರ್ಗಾ	110	40
19)	ಬಳ್ಳಾರಿ	107	236
20)	ರಾಯಚೂರು	126	122
21)	ಬೀದರ್	63	123
	ಒಟ್ಟು	**2860**	**7867**

ಶಿವಮೊಗ್ಗ ಮೆಗ್ಗಾನ್ ಆಸ್ಪತ್ರೆಯ ವಿಸ್ತರಣಾ ಯೋಜನೆ

418 (330) ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ಶಿವಮೊಗ್ಗ ಮೆಗ್ಗಾನ್ ಆಸ್ಪತ್ರೆಯ ವಿಸ್ತರಣಾ ಕಾರ್ಯಕ್ರಮದ ಅಂಗವಾಗಿ ಪ್ರಾರಂಭಿಸಲಾಗಿರುವ ಹೊಸ ಆಸ್ಪತ್ರೆಯ ಕಟ್ಟಡದ ಅಂದಾಜು ಮೊತ್ತ ಎಷ್ಟು ಮತ್ತು ಯಾವ ವರ್ಷದಲ್ಲಿ ಸದರೀ ಆಸ್ಪತ್ರೆ ಕಟ್ಟಡದ ಕಾಮಗಾರಿಯನ್ನು ಪ್ರಾರಂಭ ಮಾಡಲಾಯಿತು?

2) 1995-96, 1996-97 ಮತ್ತು 1997-98 ನೇ ಸಾಲುಗಳಲ್ಲಿ ಈ ಕಟ್ಟಡ ನಿರ್ಮಾಣಕ್ಕೆ ಒದಗಿಸಿದ ಹಣವೆಷ್ಟು?

3) ಮೇಲ್ಕಂಡ ಮೂರು ಸಾಲುಗಳಲ್ಲಿ ಸಾಧಿಸಿದ ಆರ್ಥಿಕ ಮತ್ತು ಭೌತಿಕ ಸಾಧನೆ ಎಷ್ಟು?

4) ಆಸ್ಪತ್ರೆ ಕಟ್ಟಡವನ್ನು ಪೂರೈಸಲು ಇನ್ನೂ ಹಣ ಎಷ್ಟು ಬೇಕು ಮತ್ತು ಯಾವಾಗ ಪೂರೈಸಲಾಗುವುದು?

ಡಾ: ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

1) ರೂ. 18.50 ಕೋಟಿಗಳ ಅಂದಾಜು ವೆಚ್ಚದಲ್ಲಿ 1992-93ರಲ್ಲಿ ಪ್ರಾರಂಭ ಮಾಡಲಾಯಿತು.

2) 1995-96 ರಲ್ಲಿ 100.00 ಲಕ್ಷ ರೂ. ಗಳು

1996-97 ರಲ್ಲಿ 50.00 ಲಕ್ಷ ರೂ. ಗಳು

1997-98 ರಲ್ಲಿ 15.00 ಲಕ್ಷ ರೂ. ಗಳು

ಅನುದಾನ ಈ ಕಾಮಗಾರಿಗೆ ನಿಗಧಿಪಡಿಸಿದೆ.